# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **415** |
| ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ<br>(ವಿಧಾನ ಸಭೆಯಿಂದ ಚುನಾಯಿತರು) |
| ಉತ್ತರಿಸಬೇಕಾದ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಸುರಿದ ಧಾರಾಕಾರ ಮಳೆ ಹಾಗೂ ಭೂ ಕುಸಿತದಿಂದಾಗಿ ಸುಮಾರು 5 ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ನಷ್ಟ ಸಂಭವಿಸಿ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. ಕೊಡಗು ಜಿಲ್ಲೆಯಲ್ಲಿ 2020-21 ನೇ ಸಾಲಿನಲ್ಲಿ ಭೂಕುಸಿತ ಮತ್ತು ಅತಿವೃಷ್ಟಿಯಿಂದ ಉಂಟಾದ ಹಾನಿಯ ವಿವರ ಕೆಳಕಂಡಂತಿರುತ್ತದೆ. |

| ಕ್ರ. ಸಂ. | ಹಾನಿ ವಿವರ | 2020-21 |
|---|---|---|
| 1 | ಮಾನವ ಹಾನಿ ಸಂಖ್ಯೆಯಲ್ಲಿ | 5 |
| 2 | ಜಾನುವಾರು ಹಾನಿ ಸಂಖ್ಯೆಯಲ್ಲಿ | 17 |
| 3 | ಮನೆ ಹಾನಿ ಸಂಖ್ಯೆಯಲ್ಲಿ | 342 |
| 4 | ಗುಡಿಸಲು ಹಾನಿ ಸಂಖ್ಯೆಯಲ್ಲಿ | 2 |
| 5 | ಜಾನುವಾರು ಕೊಟ್ಟಿಗೆ ಹಾನಿ ಸಂಖ್ಯೆಯಲ್ಲಿ | 35 |
| 6 | ಬೆಳೆ ಹಾನಿ ಹೆಕ್ಟೇರ್ ನಲ್ಲಿ | 41026 |
| 7 | ಮೂಲಭೂತ ಸೌಕರ್ಯ ಹಾನಿ (ರೂ.ಕೋಟಿಯಲ್ಲಿ) | 601.20 |

| ಪ್ರಶ್ನೆ | ಉತ್ತರ |
|---|---|
| (ಆ) ಬಂದಿದ್ದಲ್ಲಿ, ಸರ್ಕಾರ ಮಳೆಹಾನಿ ಪರಿಹಾರವಾಗಿ ಇದುವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ; | ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಯವರ ಪ್ರಕೃತಿ ವಿಕೋಪ ಪಿ.ಡಿ. ಖಾತೆಯಲ್ಲಿ ರೂ.70.76ಕೋಟಿ ಮೊತ್ತ ಲಭ್ಯವಿದೆ. |
| (ಇ) ಸದರಿ ಬಿಡುಗಡೆಗೊಂಡ ಪರಿಹಾರದ ಹಣದಲ್ಲಿ, ಸಂಕಷ್ಟದಲ್ಲಿರುವ ಜನರಿಗೆ ಸರ್ಕಾರ ಇದುವರೆಗೂ ಕಲ್ಪಿಸಿರುವ ಪರಿಹಾರ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಿಂದ ಸಂಕಷ್ಟದಲ್ಲಿರುವವರಿಗೆ ಇದುವರೆಗೆ ಕಲ್ಪಿಸಲಾಗಿರುವ ಪರಿಹಾರದ ವಿವರಗಳು ಈ ಕೆಳಕಂಡಂತಿರುತ್ತದೆ. |

| ಕ್ರ. ಸಂ. | ವಿವರ | ವೆಚ್ಚ/ಹಾನಿ ಪಾವತಿಸಿದ ವಿವರ (ರೂ. ಲಕ್ಷಗಳಲ್ಲಿ) |
|---|---|---|
| 1 | ಜಿಲ್ಲೆಯ 9 ಕಾಳಜಿ ಕೇಂದ್ರದಲ್ಲಿ ಅತಿವೃಷ್ಟಿ ಸಂದರ್ಭದಲ್ಲಿ ಆಶ್ರಯ ಕಲ್ಪಿಸಿದ 710 ಸಂತ್ರಸ್ಥರ ನಿರ್ವಹಣೆಗೆ ವೆಚ್ಚವಾದ ಮೊತ್ತ | 15.15 |
| 2 | ಪ್ರಕೃತಿ ವಿಕೋಪದಿಂದ ಮನೆಯಲ್ಲಿರುವ ದಿನ ನಿತ್ಯ ವಸ್ತುಗಳು ಹಾನಿಯಾದ 82 ಸಂತ್ರಸ್ತ ಕುಟುಂಬಗಳಿಗೆ ತಲಾ ರೂ.10,000/-ದಂತೆ ಪರಿಹಾರ ವಿತರಿಸಿದ ವಿವರ. | 8.20 |
| 3 | ಭಾಗಮಂಡಲದಲ್ಲಿ ರಕ್ಷಣಾ ಮತ್ತು ಶೋಧನ ಕಾರ್ಯಚರಣೆಗೆ ವೆಚ್ಚವಾದ ಮೊತ್ತ | 15.96 |
| 4 | ಭಾರಿ ಮಳೆ ಸಂದರ್ಭ ಪರಿಶಿಷ್ಟ ಪಂಗಡದ 343 ಕುಟುಂಬದವರಿಗೆ ಟಾರ್ಪಲ್ ವಿತರಿಸಿದ ವೆಚ್ಚದ ವಿವರ. | 6.71 |

...2

| | |
|---|---|
| | 2020-21ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ 'ಎ' ವರ್ಗದ ಮನೆಗಳಿಗೆ ರೂ.5.00ಲಕ್ಷ, 'ಬಿ' ವರ್ಗದ ಮನೆಗಳಿಗೆ ರೂ.3.00ಲಕ್ಷ, 'ಸಿ' ವರ್ಗದ ಮನೆಗಳಿಗೆ ರೂ.50 ಸಾವಿರ, ಕೊಟ್ಟಿಗೆ ಹಾನಿಗೆ ರೂ.2,100/-ಗಳು, ಗುಡಿಸಲು ಹಾನಿಗೆ ರೂ.4,100/-ಗಳ ಪರಿಹಾರ ವಿತರಣೆಗೆ ಮತ್ತು ಬೆಳೆ ಹಾನಿ ನಷ್ಟ ಪರಿಹಾರ ವಿತರಣೆ ಸಂಬಂಧ ಸಮೀಕ್ಷೆ ಪ್ರಗತಿಯಲ್ಲಿದ್ದು, ನಿಯಾಮಾನುಸಾರ ಪರಿಹಾರ ವಿತರಣೆಗೆ ಕ್ರಮಕೈಗೊಳ್ಳಲಾಗಿದೆ. |

*ಕಂಇ 423 ಟಿಎನ್‌ಆರ್ 2020*

**(ಆರ್. ಅಶೋಕ)**
ಕಂದಾಯ ಸಚಿವರು